ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 12.09.2023.

**ಪಾಟೀ ಸವಾಲುಃ** 1 ರಿಂದ 5 ನೇ ಪ್ರತಿವಾದಿಯರ ಪರ ವಕೀಲರಿಂದಃ

ದಾವಾ ಸ್ವತ್ತುಗಳು ನನ್ನ ತಂದೆಯ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿ. ನನ್ನ ತಂದೆ ಹೆಸರು ಮೌಲಾಸಾಬ ಇರುತ್ತದೆ. ನನ್ನ ತಂದೆಗೆ ಒಬ್ಬರೆ ಹೆಂಡತಿ ಮೌಲಾಬೀ ಇರುತ್ತಾರೆ. ಇವರನ್ನು ಹೊರತುಪಡಿಸಿ ಬೇರೆ ಯಾರು ಇರುವುದಿಲ್ಲ. ನನ್ನ ಅಣ್ಣ ಅಮೀರ್ ಅಲಿ ಮಾತ್ರ ಇರುತ್ತಾರೆ. ಸದರಿ ಅಮೀರ್ ಅಲಿ ಬಿಟ್ಟು ನನಗೆ ಬೇರೆ ಯಾರು ಅಣ್ಣನಾಗಲಿ ಅಥವಾ ತಮ್ಮನಾಗಲಿ ಇರುವುದಿಲ್ಲ. ನನ್ನ ಅಣ್ಣನ ಹೆಂಡತಿ ಮಕ್ಕಳು ಇರುತ್ತಾರೆ. ನನ್ನ ತಂದೆ ತಿರಿಕೊಂಡು ಸುಮಾರು 18 ವರ್ಷವಾಗಿರುತ್ತದೆ. ನನ್ನ ತಾಯಿ ಮೌಲಾಬೀ ತಿರಿಕೊಂಡು ಸುಮಾರು 5-6 ವರ್ಷವಾಗಿರುತ್ತದೆ.

ನನ್ನ ತಂದೆ ತಿರಿಕೊಂಡ ನಂತರ ನನ್ನ ಅಣ್ಣನ ಹೆಂಡತಿಯಾದ 1 ನೇ ಪ್ರತಿವಾದಿಯನ್ನು ದಾವಾ ಆಸ್ತಿಗಳಲ್ಲಿ ಪಾಲು ಕೇಳಿರುತ್ತೇನೆ, ಆದರೆ ಕೊಡುತ್ತೇನೆ ಎಂದು ಮುಂದೂಡುತ್ತಾ ಬಂದಿರುತ್ತಾರೆ. 6 ಮತ್ತು 7 ನೇ ಪ್ರತಿವಾದಿಯರು ನಮ್ಮ ಕುಟುಂಬಕ್ಕೆ ಯಾವುದೇ ಸಂಬಂಧ ಇರುವುದಿಲ್ಲ, ನಾನು ಅವರನ್ನು ಯಾವಗಲೂ ಬೇಟಿಯಾಗಿರುವುದಿಲ್ಲ. ದಾವಾ ಸ್ವತ್ತುಗಳಲ್ಲಿ 6 ಮತ್ತು 7 ನೇ ಪ್ರತಿವಾದಿಯರ ಹೆಸರು ದಾಖಲಾಗಿದ್ದು, ಈದಾವೆ ಸಲ್ಲಿಸುವ ಕಾಲಕ್ಕೆ ನನಗೆ ಗೊತ್ತಾಗಿರುತ್ತದೆ. ದಾವಾಸ್ವತ್ತುಗಳಲ್ಲಿ 6 ಮತ್ತು 7 ನೇ ಪ್ರತಿವಾದಿಯರ ಹೆಸರು ಬಂದಿದ್ದು, 1 ನೇ ಪ್ರತಿವಾದಿಗೆ ಕೂಡಾ ಗೊತ್ತಿರಲಿಲ್ಲ, ಈ ದಾವೆ ಹಾಕುವ ಕಾಲಕ್ಕೆ ಗೊತ್ತಾಗಿರುತ್ತದೆ.

ಇವತ್ತಿಗೂ ಕೂಡಾ ದಾವಾ ಸ್ವತ್ತುಗಳಲ್ಲಿ ಸಾಗುವಳಿ ನನ್ನ ಅಣ್ಣ ಹೆಂಡತಿ ಅವರ ಮಕ್ಕಳು ಮಾಡುತ್ತಾರೆ. ನನ್ನ ತಂದೆಯಾಗಲಿ ಅಥವಾ ಅಣ್ಣನಾಗಲಿ ಅಥವಾ ಆತನ ಹೆಂಡತಿ ಮಕ್ಕಳಾಗಲಿ ಯಾವತ್ತಿಗೂ ಕೂಡಾ 6 ಮತ್ತು 7 ನೇ ಪ್ರತಿವಾದಿಯರಿಗೆ ಮಾಡಿಕೊಟ್ಟಿರುವುದಿಲ್ಲ. ಪ್ರತಿವಾದಿಯರು ಹೇಳುವ ಹಾಗೇ ನನ್ನ ತಂದೆ ಮೌಲಾಸಾಬ ರವರು ನನ್ನ ಅಣ್ಣನಾದ ಅಮೀರ ಅಲಿಗೆ ಮೌಖಿಕ ಹಿಭಾ ಮಾಡಿಕೊಟ್ಟಿತ್ತಾರೆ ಎಂದು ಹೇಳುವ ಸಂಗತಿ ಸುಳ್ಳು ಇರುತ್ತದೆ. ಸದರಿ ಹಿಭಾ ಮಾಡಿದ ಬಗ್ಗೆ ನಮಗೆ ಗೊತ್ತಿದ್ದರೂ ಕೂಡಾ ನಾವು ಈ ದಾವೆ ಮಾಡುವವರೆಗೂ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕೊಡುತ್ತೇವೆ ಎಂದು ಮುಂದೂಡುತ್ತಾ ಬಂದಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಯಾವತ್ತಿಗೂ ನಮಗೆ ದಾವಾ ಸ್ವತ್ತುಗಳಲ್ಲಿ ಹಿಸ್ಸೆ ಕೊಡುತ್ತೇವೆ ಎಂದು ಹೇಳಿಲ್ಲಾ ಎಂದರೆ ಸರಿಯಲ್ಲ.

1 ರಿಂದ 5 ನೇ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 7 ಮತ್ತು 10 ನೇ ಪ್ರತಿವಾದಿಯರ ಪರ ವಕೀಲರಿಂದಃ**

ನಾನು ರಾಯಗಡ ಜಿಲ್ಲೆ, ಕರಜತ್ ಗ್ರಾಮದಲ್ಲಿ ಇರುತ್ತೇನೆ. ನನ್ನ ಮದುವೆಯಾಗಿ 35 ವರ್ಷವಾಗಿರುತ್ತದೆ. ಸುಮಾರು 35 ವರ್ಷಗಳಿಂದ ನಾನು ನನ್ನ ಗಂಡನ ಮನೆಯಲ್ಲಿಯೇ ಇರುತ್ತೇನೆ ಎಂದರೆ ಸರಿ. 2 ನೇ ವಾದಿ ಠಾನೆ ಜಿಲ್ಲೆಯ, ಬಿವಂಡಿ ಊರಲ್ಲಿ ಇರುತ್ತಾಳೆ. 2 ನೇ ವಾದಿಯ ಮದುವೆಯಾಗಿ ಸುಮಾರು 23 ವರ್ಷವಾಗಿರುತ್ತದೆ. 23 ವರ್ಷಗಳಿಂದ ಕೂಡಾ ಅವರು ಅವಳ ಗಂಡನ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತುಗಳ ಸರ್ವೆ ನಂ. 16 ವಿಸ್ತೀರ್ಣ 12 ಎಕರೆ ಜಮೀನು ಇರುತ್ತದೆ. ಸರ್ವೆ ನಂ.44 ರಲ್ಲಿ 6 ಎಕರೆ ಚಿಲ್ಲರೆ ಗುಂಟೆ ಇರುತ್ತದೆ. ನನ್ನ ತಂದೆಗೆ ಸುಮಾರು 18 ಎಕರೆ ಜಮೀನು ಇರುತ್ತದೆ. ನನ್ನ ಅಜ್ಜನಿಂದ 6 ಎಕರೆ ಜಮೀನು ಬಂದಿತ್ತು, ಅದು ಭೂ-ಸ್ವಾಧಿನವಾಗಿರುತ್ತದೆ. ಸದರಿ ಜಮೀನಿನ ಸರ್ವೆ ನಂಬರ ನನಗೆ ಗೊತ್ತಿಲ್ಲಾ. ನನ್ನ ತಂದೆಗೆ ಮೇಲೆ ಜಮೀನುಗಳನ್ನು ಹೊರತುಪಡಿಸಿ ಬೇರೆ ಯಾವುದೇ ಜಮೀನುಗಳು ಇರುವುದಿಲ್ಲ.

1 ನೇ ಪ್ರತಿವಾದಿ ನನ್ನ ಅಣ್ಣನ ಹೆಂಡತಿ ಅವಳ ಹೆಸರಿನಲ್ಲಿ 6 ಎಕರೆ ಜಮೀನು ಇರುತ್ತದೆ. ಸದರಿ 6 ಎಕರೆ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲಾ. ಸದರಿ 6 ಎಕರೆ ಜಮೀನು ಈ ಮೊದಲು ನನ್ನ ತಂದೆಯ ಹೆಸರಿನಲ್ಲಿ ಇತ್ತು ಹಾಗೂ ಅದು 1 ನೆ ಪ್ರತಿವಾದಿ ಹೆಸರಿನಲ್ಲಿ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಜಮೀನನ್ನು ನನ್ನ

ಅಣ್ಣ ಅಮೀರ್ ಅಲಿ ಸ್ವಂತ ಖರೀದಿಸಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ 6 ಎಕರೆ ಜಮೀನನ್ನು ನನ್ನ ಅಣ್ಣ ಸ್ವಂತ ಖರೀದಿಸಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ 6 ಎಕರೆ ಜಮೀನನ್ನು ಅಣ್ಣ ಅಮೀರ್ ಅಲಿ ಖರೀದಿಸಿದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲಾ.

ನಾನು ಈ ದಿನ ನ್ಯಾಯಾಲಯಕ್ಕೆ ಈ ಕೇಸಿನ ಸಲುವಾಗಿ ಮೊದಲ ಬಾರಿಗೆ ಬಂದಿರುತ್ತೇನೆ, ಈ ಹಿಂದೆ ಯಾವತ್ತು ಬಂದಿಲ್ಲಾ. ನಾನು ಈ ಕೇಸ್ ದಾಖಲು ಮಾಡುವ ಸಲುವಾಗಿ ನಾನು ಹಾಗೂ 2 ನೇ ವಾದಿ ಈ ಹಿಂದೆ ಒಂದು ಬಾರಿ ಬಂದಿದ್ದೇವು, ಅದನ್ನು ಹೊರತುಪಡಿಸಿ ನನ್ನ ಜೀವಮಾನದಲ್ಲಿ ಯಾವತ್ತು ಬಂದಿಲ್ಲಾ. ನಾನು ಶ್ರೀ ಬಿ.ಡಿ.ಕೆ. ವಕೀಲರನ್ನು ಹೊರತುಪಡಿಸಿ ಬೇರೆ ವಕೀಲರಿಗೆ ಈ ಕೇಸ್ ನಡೆಸಲು ಕೊಟ್ಟಿರುವುದಿಲ್ಲ. ಭೂ- ಸ್ವಾಧಿನಪಡಿಸಿಕೊಂಡ ಜಮೀನಿನ ಪರಿಹಾರ ದನಲ್ಲಿ ನಮಗೆ ಹಣ ಬರಬೇಕು ಹಾಗೂ ದಾವಾ ಸ್ವತ್ತುಗಳಲ್ಲಿ ನಮಗೆ ಹಿಸ್ಸೆ ಬರಬೇಕು. ಸಾಕ್ಷಿ ಮುಂದುವರೆದು ಪರಿಹಾರ ಬಂದ ಸಮಯದಲ್ಲಿ ನಾವು ಚಿಕ್ಕವರು ಇದ್ದೇವು, ಪರಿಹಾರ ಹಣ ಇನ್ನು ಬರುವುದು ಇರುತ್ತವೆ, ಅದರಲ್ಲಿ ಕೂಡಾ ನನಗೆ ಹಿಸ್ಸೆ ಇರುತ್ತದೆ.

ಪರಿಹಾರ ಹಣದ ಬಗ್ಗೆ ದಾವೆಯಲ್ಲಿ ನಾವು ಏನೂ ಹೇಳಿಲ್ಲಾ. ನನ್ನ ತಂದೆ ಮರಣ ಪ್ರಮಾಣ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ತಂದೆ ಮರಣ ಪ್ರವಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ನನಗೆ ಗೊತ್ತಿಲ್ಲಾ. ನನ್ನ ತಾಯಿಯ ಮರಣ ಪ್ರಮಾಣ ಪತ್ರವನ್ನು ಕೂಡಾ ನಾನು

ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲಾ. ನನ್ನ ತಂದೆಗೆ ಮೌಲಾಸಾಬ ಮತ್ತು ಬಾಬುಮಿಯಾ ಎಂದು ಕರೆಯುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಮೌಲಾಬೀ ತಂಗಿಯ ಹೆಸರು ಚಾಂದಬೀ ಇರುತ್ತದೆ. ಚಾಂದಬೀ ನನ್ನ ಖಾಸಾ ಚಿಕ್ಕಮ್ಮ ಇರುತ್ತಾರೆ, ನನ್ನ ಚಿಕ್ಕಮ್ಮ ಇವತ್ತಿಗೂ ಜೀವಂತ ಇದ್ದಾಳೆ. ನನ್ನ ಚಿಕ್ಕಮ್ಮ, ನನ್ನ ತಾಯಿ ಮೌಲಾಬೀ ಹಾಗೂ ನನ್ನ ತಂದೆ ಕೂಡಿ ಇರುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ಚಿಕ್ಕಮ್ಮ ಲಾಡ ಚಿಂಚೋಳಿ ಗ್ರಾಮದವರು ಎಂದರೆ ಸರಿ. ನನ್ನ ತಾಯಿಯ ತಂದೆ ಹೆಸರು ಮದರಸಾಬ ಇರುತ್ತದೆ ಮತ್ತು ನನ್ನ ತಾಯಿಯ ತಾಯಿಯ ಹೆಸರು ಕುಲಸುಮಬೀ ಇರುತ್ತದೆ.

ನನ್ನ ಚಿಕ್ಕಮ್ಮ ಚಾಂದಬೀ ರವರು ಮದುವೆ ಲಾಡ ಚಿಂಚೋಳಿ ಗ್ರಾಮದ ಹುಸೇನಸಾಬ ಎಂಬುವವರ ಜೊತೆ ಆಗಿತ್ತು ಎಂದರೆ ಸರಿ. ತದನಂತರ ಸದರಿ ಹುಸೇನ್ ಸಾಬ ರವರಿಗೆ ನನ್ನ ಚಿಕ್ಕಮ್ಮ ತಲಾಕ್ ಕೊಟ್ಟು, ನನ್ನ ತಂದೆ ಜೊತೆ ವಾಸಿಸಲು ಪ್ರಾರಂಭೀಸಿರುತ್ತಾರೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿ ವಯಸ್ ಸುಮಾರು 40 ವರ್ಷ ಇರಬಹುದು. 7 ನೇ ಪ್ರತಿವಾದಿ ವಯಸ್ ಸುಮಾರು 35 ರಿಂದ 40 ವರ್ಷ ಇರಬಹುದು. ನನ್ನ ಚಿಕ್ಕಮ್ಮ ನಮ್ಮ ತಂದೆ ಜೊತೆ ಬಂದು ವಾಸಿಸಲು ಪ್ರಾರಂಭೀಸಿದ ನಂತರ 6 ಮತ್ತು 7 ನೇ ಪ್ರತಿವಾದಿಯರು ನನ್ನ ತಂದೆ ಮತ್ತು ನನ್ನ ಚಿಕ್ಕಮ್ಮನಿಗೆ ಜನಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಕಾರಣ ನನ್ನ ತಂದೆ ತನ್ನ ಐಯಾತಿ ನಂತರ ದಾವಾ ಸ್ವತ್ತುಗಳು ತನ್ನ 2 ನೇ ಹೆಂಡತಿಯಾದ ಚಾಂದಬೀ ರವರ ಮಕ್ಕಳಾದ 6 ಮತ್ತು 7 ನೇ ಪ್ರತಿವಾದಿಯರಿಗೆ ಹೋಗಬೇಕೆಂದು ಅವರ ಹೆಸರಿನಲ್ಲಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಪಹಣಿಗಳನ್ನು ನಾನು ಈ ದಾವೆ ಮಾಡುವ ಕಾಲಕ್ಕೆ ನೋಡಿರುತ್ತೇನೆ. 8 ರಿಂದ 10 ನೇ ಪ್ರತಿವಾಯರಿಗೆ ದಾವಾ ಸ್ವತ್ತುನ್ನು ಯಾವಾಗ ಮತ್ತು ಯಾರು ಮಾರಾಟ ಮಾಡಿರುತ್ತಾರೆ ಎಂಬುವುದು ನನಗೆ ಗೊತ್ತಿಲ್ಲಾ. ಈ ದಾವೆ ಮಾಡಲು ನಮ್ಮ ವಕೀಲರಿಗೆ ನಾವೇ ಮಾಹಿತಿ ಕೊಟ್ಟಿರುತ್ತೇವೆ.

(ಈ ಹಂತದಲ್ಲಿ 7 ಮತ್ತು 10 ನೇ ಪ್ರತಿವಾದಿಯರ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**